ಇಳಿದುಹೋಗುವ ಮಹಿಳೆಯರ ಸಾಲನ್ನು ನೋಡುವುದೇ ಒಂದು ಅದ್ಭುತ ಅನುಭವ. ಹಾಗಂತ ಮುಂಬಯಿ ಹೆಣ್ಣುಮಕ್ಕಳೆಂದರೆ ಕೇವಲ ಕೋಮಲೆಯರು ಎಂದು ಕಾವ್ಯ ಕಟ್ಟದಿರಿ. ಸೀಟು ಹಿಡಿಯಲು ಟ್ರೇನು ಚಲಿಸುತ್ತಿರುವಾಗಲೇ ಪುರುಷರಂತೆ ಜಂಪ್ ಹೊಡೆಯುವ ಸಾಹಸಿ ಸ್ತ್ರೀಯರೂ ಇದ್ದಾರೆ. ಒಮ್ಮೊಮ್ಮೆ ಹೆಂಗಸರಲ್ಲೇ ಕುಚ್ ಗಡಬಡ್ ಆಗಿ ಮಾರಾಮಾರಿಯಾಗುವುದು ಗಂಡಸರಿಗೆ ನಾವೇನು ಕಡಿಮೆ ಎಂದು ಸವಾಲು ಹಾಕುವಂತಿರುತ್ತದೆ.

ಕೆಲವು ಟ್ರೇನುಗಳಲ್ಲಿ ಲೇಡೀಸ್ ಡಬ್ಬಾ ಮತ್ತು ಜನರಲ್ ಡಬ್ಬಾ ನಡುವೆ ಜಾಳಿಗೆ ಇರುತ್ತದೆ. ಮುಂಬೈಗೆ ಬಂದ ಹೊಸದರಲ್ಲಿ ನನ್ನ ಗೆಳೆಯನೊಬ್ಬನಿಗೆ ಆಚೆ ಇಣುಕುವ ಕುತೂಹಲ. ಒಮ್ಮೆ ಮಧುಬಾಲಾಳಂತಹ ಕಣ್ಣುಗಳ ಆ ಹುಡುಗಿಯನ್ನು ಮೂರ್ನಾಲ್ಕು ಸ್ಟೇಶನ್ನು ದಾಟುವವರೆಗೂ ಆತನು ಗಮನಿಸುತ್ತಿದ್ದಿರಬೇಕು. ದಪ್ಪಗಿರುವ ಕೋಳಿ ಹೆಂಗಸೊಬ್ಬಳು ಅವನ ನೋಟಕ್ಕೆ ಅಡ್ಡಬಂದರೂ ಗೋಣು ಉದ್ದ ಮಾಡಿ ನೋಡೇನೋಡಿದ. ಯಾವುದೋ ಸ್ಟೇಶನ್ನಿನಲ್ಲಿ ಆ ಧಡೂತಿ ಹೆಂಗಸು ಇಳಿದು ಹೋದಾಗ ಖುಶಿಯಾಗಿ ಮಧುಬಾಲಾಳನ್ನು ಇಡಿಯಾಗಿ ಕಣ್ತುಂಬಿಕೊಳ್ಳುವವನಿದ್ದ. ಯಾರೋ ಹಿಂದಿಂದ ಕಾಲರ್ ಜಗ್ಗಿದಂತಾಗಿ ತಿರುಗಿದರೆ ಅದೇ ಕೋಳಿ ಹೆಂಗಸು! 'ಕ್ಯಾರೆ, ಲೇಡೀಸ್ ಡಬ್ಬಾ ಮೆ ನಜರ್ ಮಾರ್ತಾ ಹೈ?' ಎಂದು ಅವನನ್ನು ಎತ್ತಿಬಿಟ್ಟಳು. ನನ್ನ ಗೆಳೆಯ ವರ್ಷಗಟ್ಟಲೆ ಲಗೇಜ್ ಕಂಪಾರ್ಟ್‌ಮೆಂಟಿನಲ್ಲಿ ಅಡ್ಡಾಡಿದ!

## ಆಮ್ಚಿ ಲೋಕಲ್

ಇತ್ತೀಚೆಗೆ ಮುಂಬಯಿ ದರ್ಶನಕ್ಕೆ ಬರುವ ದೇಶಿ ಮತ್ತು ವಿದೇಶಿ ಯಾತ್ರಿಕರೂ ಲೋಕಲ್ ಪ್ರಯಾಣದ 'ರುಚಿ' ನೋಡುತ್ತಾರೆ. ಪ್ರತಿ ಮೂರು ನಿಮಿಷಕ್ಕೊಂದರಂತೆ ಚಲಿಸುವ ಟ್ರೇನುಗಳು ಲಕ್ಷಾಂತರ ಪ್ರಯಾಣಿಕರನ್ನು ಅವರವರ ಸ್ಥಾನಗಳಿಗೆ ತಲುಪಿಸುವ ಕೆಲಸವನ್ನು ನಿರಂತರವಾಗಿ ಮಾಡುವುದು ಎಲ್ಲರನ್ನೂ ಚಕಿತಗೊಳಿಸುತ್ತದೆ. ನಿಜ, ಇಲ್ಲಿ ಅವಘಡಗಳಾಗುತ್ತವೆ. ವರ್ಷಕ್ಕೆ ಸಾವಿರಾರು ಜನ ಚಲಿಸುವ ಟ್ರೇನಿನಿಂದ ಬಿದ್ದೋ ಇಲ್ಲ ಹಳಿ ದಾಟುವಾಗಲೋ ಅಪಘಾತಕ್ಕೀಡಾಗಿ ಸಾವನ್ನಪ್ಪುತ್ತಾರೆ. ಮಳೆಗಾಲದಲ್ಲಿ ಜೋರಾಗಿ ಮಳೆ ಸುರಿದರೆ ಟ್ರೇನ್‌ಗಳು ಸ್ಥಗಿತಗೊಂಡು ಬದುಕು ಅಸ್ತವ್ಯಸ್ತವಾಗುತ್ತದೆ. ಇದೆಲ್ಲದರ ನಡುವೆಯೂ ಲೋಕಲ್ ಟ್ರೇನುಗಳು ಈ ಮಹಾನಗರದ ಉಸಿರಾಗಿವೆ. ನಡುರಾತ್ರಿವರೆಗೂ ಹೆಣ್ಣುಮಕ್ಕಳು ಟ್ರೇನ್‌ನಲ್ಲಿ ಸುರಕ್ಷಿತವಾಗಿ ಅಡ್ಡಾಡುವುದಕ್ಕೆ ಅವಕಾಶ ಮಾಡಿಕೊಡುತ್ತವೆ. ಜಾತಿ–ಮತ, ಬಡವ–ಬಲ್ಲಿದ ಎಂದು ಭೇದ ಮಾಡದೇ, ಗಡಿರೇಖೆಗಳ ಹಂಗಿಲ್ಲದೇ ದೇಶದ ಎಲ್ಲಾ ಭಾಗಗಳಿಂದಲೂ ಬದುಕನ್ನು ಅರಸಿ ಬರುವ ಮೆಹನತೀ ಜನರನ್ನು ನಿರಂತರ ಚೈತನ್ಯಶೀಲರನ್ನಾಗಿಟ್ಟಿವೆ. ಹೀಗಾಗಿ ಆಮ್ಚಿ ಮುಂಬೈ ಲೋಕಲ್‌ಗಳೆಂದರೆ ಎಲ್ಲರಿಗೂ ಪ್ರೀತಿ ಮತ್ತು ಹೆಮ್ಮೆ!

### ರಾಜೀವ ನಾರಾಯಣ ನಾಯಕ

ಪ್ರಸ್ತುತ ಮುಂಬಯಿಯಲ್ಲಿ ಕೇಂದ್ರ ಸರಕಾರಿ ಸೇವೆಯಲ್ಲಿರುವ ರಾಜೀವ ಅವರ ಕಥಾ ಸಂಗ್ರಹ 'ಗುರ್ಬಾಣಿಕ್ಕಿ'. ಮುಂಬಯಿ ಕರ್ನಾಟಕ ಸಂಘ ಇದನ್ನು ಪ್ರಕಟಿಸಿದೆ. ಅವರು ಮುಂಬಯಿಯ ಕನ್ನಡ ರಂಗಭೂಮಿಯಲ್ಲೂ ಸಕ್ರಿಯರು.